# ಹಾಸ್ಯ ಲೋಕ ಸ್ವರ್ಗ ಸುಖ (ನಕ್ಕರೆ ಅದೇ ಸ್ವರ್ಗ)

**ಕವಿತಾ ಆರ್.** [1] **& ರಾಜಶೇಖರ ಜಮದಂಡಿ** [2]

[1] ಸಂಶೋಧನ ವಿದ್ಯಾರ್ಥಿ, ಸಮಾಜ ವಿಜ್ಞಾನ ಮತ್ತು ಮಾನವಿಕ ವಿಭಾಗ, ಶ್ರೀನಿವಾಸ ವಿಶ್ವವಿದ್ಯಾಲಯ, ಪಾಂಡೇಶ್ವರ, ಮಂಗಳೂರು. India,

ORCID ID: 0009-0003-2811-4464 Email: kavithasudheendra@gmail.com

[2] ಸಂಶೋಧನೆ ಮಾರ್ಗದರ್ಶಕರು, ಶ್ರೀನಿವಾಸ ವಿಶ್ವವಿದ್ಯಾಲಯ, ಪಾಂಡೇಶ್ವರ, ಮಂಗಳೂರು. India,

ORCID ID: 0009-0009-7036-0662 Email: rasagna.333@gmail.com

**Area/Section:** Humanity.
**Type of the Paper:** Research Article.
**Type of Review:** Peer Reviewed as per |C|O|P|E| guidance.
**Indexed in:** OpenAIRE.
**DOI:** https://doi.org/10.5281/zenodo.8170677
**Google Scholar Citation:** IJPL

**How to Cite this Paper:**

ಕವಿತಾ ಆರ್. & ರಾಜಶೇಖರ ಜಮದಂಡಿ, (2023). ಹಾಸ್ಯ ಲೋಕ ಸ್ವರ್ಗ ಸುಖ (ನಕ್ಕರೆ ಅದೇ ಸ್ವರ್ಗ). *International Journal of Philosophy and Languages (IJPL), 2*(1), 48-52. DOI: https://doi.org/10.5281/zenodo.8170677

**International Journal of Philosophy and Languages (IJPL)**
A Refereed International Journal of Srinivas University, India.

Received on: 29/05/2023
Published on: 30/06/2023

Crossref DOI: https://doi.org/10.47992/IJPL.2583.9934.0013

© With Authors.

This work is licensed under a Creative Commons Attribution-Non-Commercial 4.0 International License subject to proper citation to the publication source of the work.

**Disclaimer:** The scholarly papers as reviewed and published by Srinivas Publications (S.P.), India are the views and opinions of their respective authors and are not the views or opinions of the SP. The SP disclaims of any harm or loss caused due to the published content to any party.

# ಹಾಸ್ಯ ಲೋಕ ಸ್ವರ್ಗ ಸುಖ (ನಕ್ಕರೆ ಅದೇ ಸ್ವರ್ಗ)

**ಕವಿತಾ ಆರ್.** [೧] **& ರಾಜಶೇಖರ ಜಮದಂಡಿ** [೨]

[೧] ಸಂಶೋಧನ ವಿದ್ಯಾರ್ಥಿ, ಸಮಾಜ ವಿಜ್ಞಾನ ಮತ್ತು ಮಾನವಿಕ ವಿಭಾಗ, ಶ್ರೀನಿವಾಸ ವಿಶ್ವವಿದ್ಯಾಲಯ, ಪಾಂಡೇಶ್ವರ, ಮಂಗಳೂರು. India,

ORCID ID: 0009-0003-2811-4464 Email: kavithasudheendra@gmail.com

[೨] ಸಂಶೋಧನೆ ಮಾರ್ಗದರ್ಶಕರು, ಶ್ರೀನಿವಾಸ ವಿಶ್ವವಿದ್ಯಾಲಯ, ಪಾಂಡೇಶ್ವರ, ಮಂಗಳೂರು. India,

ORCID ID: 0009-0009-7036-0662 Email: rasagna.333@gmail.com

## ಮುನ್ನುಡಿ

**ಉದ್ದೇಶ:** *ಹಾಸ್ಯ ಬರೀ ಸಂತಸವನ್ನು ನೀಡುವುದಲ್ಲ. ಹಾಸ್ಯ ಪರಸ್ಪರ ಆತ್ಮೀಯತೆಯನ್ನು ಆಸ್ವಾದಿಸುವುದಕ್ಕೆ ಇರುವ ಒಂದು ಶಕ್ತಿ. ಹಣದಿಂದ ಒಬ್ಬ ವ್ಯಕ್ತಿಯನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ ಹಾಸ್ಯದಿಂದ / ನಗುವಿನಿಂದ ವ್ಯಕ್ತಿಯನ್ನು ಗೆಲ್ಲಲು ಸಾಧ್ಯ ಮತ್ತು ದೃಢವಾಗಿ ನಿಲ್ಲಲು ಸಾಧ್ಯ.*

*ಪ್ರೀತಿ ಮತ್ತು ನಗು ಎಷ್ಟು ಚಿಕ್ಕ ಪದ. ಆದರೆ ಆ ಪದಗಳಿಗೆ ಇಡೀ ಜಗತ್ತನ್ನು ಗೆಲ್ಲುವ ಶಕ್ತಿ ಇದೆ. ನಗು ಇರುವ ಕಡೆ ಪ್ರೀತಿ ಬೆಳೆಯುತ್ತೆ. ಪ್ರೀತಿ ಬೆಳೆದ ಕಡೆ ನಗು ತುಂಬಿರುತ್ತೆ.*

*ಹಾಸ್ಯ ಪ್ರಜ್ಞೆಯನ್ನು ಎಲ್ಲರನ್ನು ಮೂಡಿಸಿ ನಗು-ನಗುತ್ತಾ ಇರುವಂತೆ ಮಾಡುವುದೇ ಇದರ ಉದ್ದೇಶ. ಅಷ್ಟೇ ಅಲ್ಲ ಇತರರ ಗಮನವನ್ನು ಆಕರ್ಷಿಸುವುದು. ಸಾಮರಸ್ಯವನ್ನು ಸೃಷ್ಟಿಸುವುದು. ಸಂದೇಶವನ್ನು ಸ್ಮರಣಾರ್ಹವಾಗಿ ಪರಿವರ್ತಿಸುವುದು. ಉದ್ವೇಗ, ಉದ್ರೇಕಗಳನ್ನು ಉಪಶಮನ ಮಾಡುವುದು. ಸಂಬಂಧಗಳ ನಿಕಟತೆಯನ್ನು ಹೆಚ್ಚಿಸುವುದು ಹಾಗೂ ಇತರ ಕಾರ್ಯವಿಧಾನಗಳು ಅಯಶಸ್ವಿಯಾದಾಗ ವಿವಾದ ವೈಷಮ್ಯಗಳನ್ನು ಪರಿಹರಿಸುವುದು.*

*ನಮ್ಮ ಜೀವನದಲ್ಲಿ ನಾವೆಲ್ಲರೂ ಹುಟ್ಟಿದ ಮೇಲೆ ಸಾಯಲೇಬೇಕು. ಸಾಯೋದೊಳಗೆ ಏನಾದರೂ ಸಾಧನೆ ಮಾಡಬೇಕು. ಆ ಸಾಧನೆ ನಮ್ಮ ಜೀವನದಲ್ಲಿ ಕಷ್ಟ ಬರಲಿ, ಸುಖಬರಲಿ, ನಗ್ತಾ ಇರಬೇಕು. ನಗಿಸ್ತಾ ಇರಬೇಕು ಅನ್ನೋದು ಹಾಸ್ಯದ ಪ್ರಮುಖ ಉದ್ದೇಶ.*

*ನಗುವನ್ನು ಅಟ್ಟಿ ಬದುಕಿದರೆ ಜೀವನ ತುಟ್ಟಿ*
*ನಗುವನ್ನು ಮೆಟ್ಟಿ ಬದುಕಿದರೆ ಜೀವನ ಗಟ್ಟಿ*
*ನಗುವನ್ನು ಬಿಟ್ಟು ಬದುಕಿದರೆ ಜೀವನ ಬಿಟ್ಟಿ*
*ನಗುವನ್ನು ಗಟ್ಟಿ ಹಿಡಿದು ಹಂಚಿ ಬದುಕಿದರೆ ಸ್ವರ್ಗ ಸೃಷ್ಟಿ.*
*ನಗ್ತಾ ಇದ್ರೆ ಆಯಸ್ಸು ಜಾಸ್ತಿಯಂತೆ*
*ನಗದೇ ಇರೋರಿಗೆ ಹೇಳೋಕಾಗಲ್ವಂತೆ*

***"ಬದುಕಿನಲ್ಲಿ – ಬದುಕಿ – ನಲಿ"***

*ಇಂತಹ ಸಣ್ಣ ಸಣ್ಣ ಮಾತಿನಲ್ಲೂ ನಗುವಿನ ಜೊತೆ ನಗ್ನ ಸತ್ಯ ಕೂಡ ತಿಳಿಸಿ ಎಲ್ಲರನ್ನು ಮನವರಿಕೆ ಮಾಡುವ ಒಂದು ಪ್ರಯತ್ನವೂ ಆಗಿದೆ & ಪ್ರಮುಖ ಉದ್ದೇಶವೂ ಆಗಿದೆ.*

**ವಿಧಾನ:** (೧) ನಾಟಕಗಳಿಂದ ಹಾಸ್ಯ. (೨) ಸಿನಿಮಾಗಳಿಂದ ಹಾಸ್ಯ. (೩) ಭಾಷಣದಿಂದ ಹಾಸ್ಯ (೪) ಅಭಿನಯದಿಂದ ಹಾಸ್ಯ. (೫) ಹನಿಗವನಗಳಿಂದ ಹಾಸ್ಯ (೬) ಹಾಡಿನ ಮೂಲಕ ಹಾಸ್ಯ.

(೭) ನೃತ್ಯದ ಮೂಲಕ ಹಾಸ್ಯ. (೮) ಚಿತ್ರಕಲೆಯ ಮೂಲಕ ಹಾಸ್ಯ. (೯) ಮಿಮಿಕ್ರಿಗಳಿಂದ ಹಾಸ್ಯ. (೧೦) ದಿನನಿತ್ಯ ಸಂಸಾರದಲ್ಲಿ ಹಾಸ್ಯ. (೧೧) ಶಾಯರಿ ಮೂಲಕ ಹಾಸ್ಯ. (೧೨) ಚಟುವಟಿಕೆಗಳ ಮೂಲಕ ಹಾಸ್ಯ (ಬಲೂನ್-ಬಾಲ) (೧೩)ಏಕಪಾತ್ರಾಭಿನಯ ಮೂಲಕ ಹಾಸ್ಯ (೧೪) ಮನೋರಂಜನೆ ಕಾರ್ಯಕ್ರಮಗಳ ಮೂಲಕ ಹಾಸ್ಯ. (೧೫) ನಗೆ ಹಬ್ಬಗಳ ಮೂಲಕ ಹಾಸ್ಯ. (೧೬) ಮಾಧ್ಯಮಗಳ ಮೂಲಕ ಹಾಸ್ಯ. (೧೭) ಹಾಸ್ಯಮಯ ಕಥೆಗಳು (೧೮) ಹಾಸ್ಯ ಪ್ರಬಂಧಗಳು (೧೯) ಹಾಸ್ಯ ಪತ್ರಿಕೆಗಳು.

**ಫಲಿತಾಂಶ:** ನಾವು ಬರೆಯುವ ಲೇಖನದ ಫಲಿತಾಂಶ ಪ್ರತಿಯೊಬ್ಬರಲ್ಲೂ ಪರಿವರ್ತಿಸುವ, ಪರಿಪಕ್ವತೆ ನಗು ಕಾಣಲು ಬಯಸುತ್ತೇನೆ. ಯಾಕೆಂದರೆ ಕಷ್ಟ ಬರುತ್ತೆ ಹೋಗುತ್ತೆ ಹಣ ಬರುತ್ತೆ-ಹೋಗುತ್ತೆ. ಆಸ್ತಿ ಬರುತ್ತೆ-ಹೋಗುತ್ತೆ ಆದ್ರೆ ಹೊಟ್ಟೆ ಮಾತ್ರ ಬರುತ್ತೆ, ಹೋಗೋದೇ ಇಲ್ಲ. ತಲೆ ಕೂದಲು ಹೋಗುತ್ತೆ ಬರೋದೇ ಇಲ್ಲ. ಈ ಹೋಗುತ್ತೆ-ಬರುತ್ತೆ ಅನ್ನೊದ್ರು ಮಧ್ಯೆ ಇರುತ್ತೆ ಅನ್ನೋದಾದ್ರೆ ಅದು ನಮ್ಮ-ನಿಮ್ಮ ಸ್ನೇಹ, ಭಾಂದವ್ಯ ತಿ.ತಿ. ನಗು. ಇದನ್ನು ಓದಿದ

ಒಂದಿಷ್ಟು ಜನರಾದರೂ ದ್ವೇಷಗಳನ್ನು ಬಿಟ್ಟು ಪ್ರೀತಿಸುವಂತಾಗಲಿ, ನಗುತ್ತಾ-ನಗಿಸುವಂತರಾಗಲಿ ಎಂಬುದೇ ನನ್ನ ಮಹಾದಾಶೆ,

**ಮೌಲ್ಯ:** ಹಾಸ್ಯ-ನಗು ಬರೀ ಆನಂದ ಮಾತ್ರ ಕೊಡುವುದಿಲ್ಲ. ಕೆಲವು ಅನುಭವಗಳನ್ನು ನೀಡುತ್ತೆ, ಆ ಅನುಭವದಿಂದ "ನಾವು ಎಷ್ಟು ಓದಿದ್ದೇವೆ ಎಂಬುದು ಮುಖ್ಯವಲ್ಲ. ನಮ್ಮ ಓದು ಎಷ್ಟು ಸಂಸ್ಕಾರವನ್ನು ಕಲಿಸಿದೆ ಎಂಬುದು ಮುಖ್ಯ" ಎಂದು ಡಾ|| ಅಬ್ದುಲ್ ಖಲಂರವರು ಹೇಳಿದ್ದಾರೆ.

ನಮ್ಮ ಹಾಸ್ಯ ಇನ್ನೊಬ್ಬರಿಗೆ ನೋವುನ್ನುಂಟು ಮಾಡುವಂತಿರಬಾರದು. ಬದಲಾಗಿ ಕಷ್ಟಗಳನ್ನು ಮರೆತು. ಸಂಭ್ರಮಿಸುವ ವಾತವರಣಕ್ಕೆ ತರಬೇಕೆಂಬುದೇ ನನ್ನ ಧ್ಯೆಯ

**ಪ್ರಕಾರ:** ಪರಿಕಲ್ಪನಾ ಸಂಶೋಧನಾ

**ಪ್ರಮುಖ ಪದಗಳು:** ಹಾಸ್ಯ ಪ್ರಜ್ಞೆ, ನಕ್ಕರೆ ಸ್ವರ್ಗ, ನಗುವಿನಲ್ಲೂ ಸಂಸ್ಕಾರ ಹಾಸ್ಯ ಒಂದು ಕಲೆ. ಸಾಹಿತ್ಯ, ಹನಿಗವನ, ಮಿಮಿಕ್ರಿ, ಭಾಷಣ, ಹಾಡು, ನೃತ್ಯ, ಅಭಿನಯ, ನಾಟಕ, ಸಿನಿಮಾ, ಮನೋರಂಜನೆ ಕಾರ್ಯಕ್ರಮಗಳು.

## ೧. ಪೀಠಿಕೆ :

ಹಾಸ್ಯ ಎಂದರೇ ಪ್ರೇಕ್ಷಕರನ್ನು ಕಲಾವಿದ ನಗಿಸುವುದಷ್ಟೇ ಅಲ್ಲ. ಮನರಂಜನೆಗಾಗಿ ಅಲ್ಲ. ನಗುವಿನ ಜೊತೆಗೆ ನಿಜವಾದ ಸತ್ಯ ಸಂಗತಿಗಳನ್ನು ಮೌಲ್ಯಧಾರಿತವಾಗಿ ತಿಳಿಸುವುದು & ಅರ್ಥೈಸಿ ಪರಿವರ್ತಿಸುವುದು ಕೂಡ.

"ತನ್ನೊಳಗೆ ತಾ ನಗುವವನು ಜ್ಞಾನಿ

ತನ್ನಿಂದ ತಾನೆ ನಗುವವನು ಹುಚ್ಚ

ಗೆಳತಿಯನ್ನು ನೆನೆದು ನಗುವವನು ಪ್ರೇಮಿ

ಮೈ ಮರೆತು ನಗುವವನು ರಸಿಕ

ಇನ್ನೊಬ್ಬರನ್ನು ನೋಡಿ ನಗುವವನು ಖಳನಾಯಕ

ನಕ್ಕು ಮನರಂಜಿಸುವವನು ವಿಧೂಷಕ

ನಗುತ್ತಲೇ ವಿಜಯ ಸಾಧಿಸುವವನು ಬುದ್ಧಿವಂತ

ಸಮಸ್ಯೆಗಳ ಸುಳಿಯಲ್ಲಿದ್ದರೂ ನಗುತ್ತಾ-ನಗಿಸುವವನು ಹೃದಯವಂತ" [೧].

ನಗು (ಹಾಸ್ಯ) ಅನೇಕರಿಗೆ ಇಷ್ಟವಾಗುವುದು ಸಹಜ. ನಾಲ್ಕು ಜನರು ಸೇರಿದಾಗ ಹಾಸ್ಯ ಚರ್ಚೆಗಳಿಂದ ಸಜ್ಜಾದ ಸಂಭಾಷಣೆ ಎಲ್ಲರಿಗೂ ಮುದ ನೀಡುವ ಸಂದರ್ಭ. ಈ ಸಂದರ್ಭಗಳಲ್ಲಿ ಒದಗುವ ತೃಪ್ತಿ. ಸಂತಸ, ಪ್ರಪನ್ನತೆ, ಪರವಶತೆ, ಮನಸ್ಸಾಲ್ಲಾಗುವ ಪರಿವರ್ತನೆ ಹಾಗು ಖುಷಿಗಳನ್ನು ಸದಾ ನಮ್ಮದಾಗಿಸಿಕೊಳ್ಳುವ ಮಾರ್ಗವೆಂದರೆ ನಮ್ಮ ಹಾಸ್ಯ ಪ್ರಜ್ಞೆ. ಇದು ಅನಾದಿ ಕಾಲದಿಂದಲೂ, ಅವಿಭಕ್ತ ಕುಟುಂಬದಿಂದ ಹಾಸ್ಯ, ಹರಟೆ ಹುಟ್ಟಿ ಆತ್ಮೀಯತೆ ಸಂಬಂಧ ಹುಟ್ಟಲು ಕಾರಣವಾಯಿತು.

ನಗಿಸುವುದು ಒಂದು ಮಹಾನ್ ಕಲೆ ಅಂದರೆ ಇಂದಿನ ಯಾಂತ್ರಿಕ ಬದುಕಿನಲ್ಲಿ ಒತ್ತಡಗಳ ಹಾದಿಯಲ್ಲಿ ನಡೆಯುವವರೇ ಸಂಖ್ಯೆಯೇ ಹೆಚ್ಚು. ಅಂತಹವರ ಅಂತರಾಳಕ್ಕೆ ಮುಟ್ಟಿ ಆನಂದ ನೀಡೋ ಅವರ ಅಳು ಮುಖವನ್ನು ಬದಲಾಯಿಸಿ ನಗುವನ್ನು ಹುಟ್ಟಿಸುವ ಒಂದು ಮಹಾಮಂತ್ರ ಹಾಸ್ಯ. ಪ್ರತಿಯೊಬ್ಬರ ಜೀವನದಲ್ಲೂ ಬರೋದು ಎರಡೇ ದಿನ. ಒಂದು ಕಷ್ಟದ ದಿನ. ಮತ್ತೊಂದು ಸುಖದ ದಿನ. ದಿನ ಆನಂದ ಕೊಟ್ರೆ, ಕಷ್ಟದ ದಿನ ಅನುಭವ ಕೊಡುತ್ತಾ, ಎರಡೂ ದಿನಗಳನ್ನು ಸಮಾನ ಸ್ವೀಕಾರ ಮಾಡಬೇಕಾದರೆ ಹಾಸ್ಯ ಪ್ರಜ್ಞೆ ಇರಬೇಕು. ಆದ್ದರಿಂದ ಮನುಷ್ಯವನ್ನು ಮುದನೀಡುವ ಮಂದಹಾಸ ಬೀರುವಂತೆ ಮಾಡಲು ಇದು ಸಿನಿಮಾ, ನಾಟಕ, ಮನೋರಂಜನೆ ಕಾರ್ಯಕ್ರಮಗಳ ಮೂಲಕ ನಗೆ ಹಬ್ಬಗಳ ಮೂಲಕ ಉತ್ತಮ ಪ್ರಯತ್ನಗಳನ್ನು ಮಾಡಿ ಯಶಸ್ವಿಯಾಗಿದೆ [೨].

## ೨. ನಗು (ಹಾಸ್ಯ) ನಶಿಸಲು ಕಾರಣಗಳು :

ಅಂದು ಅವಿಭಕ್ತ ಕುಚುಂಬಗಳಿದ್ದವು. ಎಲ್ಲಾ ಸಂಬಂಧಗಳು ಒಂದೇ ಸಂಸಾರದ ಗೂಡಿನಲ್ಲಿ ಹಾಲು-ಜೇನಿನಂತೆ ಬದುಕುತ್ತಿದ್ದರು. ಅಂದು ಮನುಷ್ಯನಲ್ಲಿ ಆಸೆಗಳು ಹೆಚ್ಚಾಗಿ ಇರಲಿಲ್ಲ. ಬದಲಾಗಿ ಬೆವರು ಸುರಿಸಿ ದುಡಿದು, ತಿಂದು ಇರುವುದರಲ್ಲಿಯೇ ತೃಪ್ತಿ ಕಾಣುವ ಮನೋಭಾವವಿತ್ತು. ಆದಕಾರಣ ಎಲ್ಲರ ಮನಸ್ಸುಗಳ ಸೀಮಿತದಲ್ಲಿದ್ದು, ಹಾಸ್ಯ, ಹರಟೆ, ನಗು, ಪ್ರೀತಿ, ಅನ್ಯೂನತೆ ಉತ್ತಮ ಭಾಂಧವ್ಯಗಳನ್ನು ಕಾಣುತ್ತಿದ್ದೇವು. ಆದರೆ ಇಂದು ಮನುಷ್ಯನ ಮನಸ್ಥಿತಿ ಮತ್ತು ಪರಿಸ್ಥಿತಿಗಳು ಬದಲಾಗಿ ವಿಭಕ್ತ

ಕುಟುಂಬಕ್ಕೆ ಬಂದು ನಿಂತಿದ್ದಾನೆ. ಕೆಲಸದ ಒತ್ತಡಗಳಲ್ಲಿ ಮುಳುಗಿದ್ದಾನೆ. ಚಿಕ್ಕ ವಯಸ್ಸಿನಲ್ಲಿ ಬಿ.ಪಿ., ಶುಗರ್ ಎಂಬ ವಿವಿಧ ಕಾಯಿಲೆಗಳಿಗೆ ಅನಾರೋಗ್ಯದ ಏರುಪೇರಿನಿಂದ ಖಿನ್ನತೆಗೆ ಒಳಗಾಗಿದ್ದಾನೆ. ನಗುವನ್ನೇ ಮರೆತು ಹೋಗಿದ್ದಾನೆ. ಹರಟೆ ಮಾತುಗಳೇ ಕಾಣೆಯಾಗಿವೆ. ಆದ್ದರಿಂದ ಇಂದು ಹಣಕೊಟ್ಟು ಪಾರ್ಕ್‌ನಲ್ಲಿ ನಿಂತು ನಗುವಂತೆ ನಟಿಸಲು ಪ್ರಾರಂಭಿಸಿದ್ದಾನೆ. ಆದ ಕಾರಣ ಅವರ ಒತ್ತಡ ಕಡಿಮೆ ಮಾಡಲು, ಆರೋಗ್ಯ ವೃದ್ಧಿಸಲು, ಆಯಸ್ಸು ಹೆಚ್ಚಿಸಲು ನಗು ಅವಶ್ಯಕ."ಚಿಂತೆಯೇ ಮುಪ್ಪು-ನಗುವೇ ಯೌವ್ವನ" ಚಿಂತೆಗಿಂತ ದೊಡ್ಡ ಖಾಯಿಲೆ ಇಲ್ಲ. ನಗುವಿಗಿಂತ ದೊಡ್ಡ ಔಷಧಿ ಇಲ್ಲ [೩].

### ೨. ೧. ಹಾಸ್ಯಕ್ಕಾಗಿ ಹಣ ನೀಡಿ ಜನರು ನಗುತ್ತಿರುವುದು ವಿಪರ್ಯಾಸ:

ಇಲ್ಲಿಯವರೆಗೂ ನೋಡಿದ ಸಂಗತಿಗಳಿಂದ ಮನುಷ್ಯ ಹಣಗಳಿಸುವ, ಆಸ್ತಿ ಮಾಡುವ ದುರಾಸೆಗೆ ಬಿದ್ದು ನಗುವುದನ್ನೇ ಮರೆತಿದ್ದಾನೆ. ಇನ್ನು, ನಗಿಸುವುದೆಲ್ಲ ಬಂತು? ಅಂದು ಎಲ್ಲರೂ ಒಟ್ಟಾಗಿ ಯಾವಾಗ ಸೇರುತ್ತೇವೆ ಹಬ್ಬ-ಹರಿದಿನಗಳು, ಮದುವೆ-ಸಮಾರಂಭ ಕಾರ್ಯಗಳು ಯಾವಾಗ ಬರುತ್ತೋ ಹರಟೆ ಮಾತನಾಡಿ ಎಲ್ಲರೂ ಯಾವಾಗ ನಗ್ತಿಯೋ ಅಂತ ಕಾಯ್ತಾ ಇದ್ರು. ಅಂದು "ಅತಿಥಿ ದೇವೋಭವ" ಎಂಬ ಬೋರ್ಡ್ ನೋಡ್ತಾ ಇದ್ವಿ. ಆದರೆ ಇಂದು "ನಾಯಿ ಇದೆ ಎಚ್ಚರಿಕೆ" ಎಂಬ ಬೋರ್ಡು ನೋಡ್ತಾ ಇದ್ದೀನಿ. ಕಾರಣ ಯಾರಿಗೂ ಸಂಬಂಧಗಳು ಬೇಕಾಗಿಲ್ಲ ಅಂದು ಹಚ್ಚಹಸಿರಿನ ಬಾಳೆ ಎಲೆಗೆ ಸಂಬಂಧಗಳನ್ನು ಹೋಲಿಸುತ್ತಿದ್ದರು. ಇಂದು ಗಾಜಿನ ಪ್ಲೇಟಿಗೆ ಹೋಲಿಸುತ್ತಿದ್ದಾರೆ. ಸಂಬಂಧ ಚೂರುಚೂರಾಗುತ್ತಿವೆ. ಆದ ಕಾರಣ ನಗು, ಹಾಸ್ಯ, ಹರಟೆ, ಆತ್ಮೀಯತೆ ಇಲ್ಲ. ಹಣ ನೀಡಿ ಸಿನಿಮಾ, ಕ್ಲಬ್, ನಗೆಹಬ್ಬ, ಮನೋರಂಜನ ಕಾರ್ಯಕ್ರಮಗಳ ಮೂಲಕ ನಗುವನ್ನು ಕಾಣುತ್ತಿರುವುದು ವಿಪರ್ಯಾಸ.
**ಹಾಸ್ಯಚಟಾಕಿ:** ಮದುವೆ ಅನ್ನೋದು ಕೆ.ಎಸ್.ಆರ್.ಟಿ.ಸಿ. ಬಸ್ ಇದ್ದ ಹಾಗೆ ತುಂಬ ಹೊತ್ತು ಕಾದು ಕಾದು ಸಾಕಾಗಿ ಕಡೆಗೆ ಕೆಂಪು ಬಸ್ ಹತ್ತಿ ಕೂರ್ತಿವಿ ಟಿಕೇಟ್ ತೊಗೊಂಡ ಮೇಲೆ ಹಿಂದೆ ತಿರುಗಿ ನೋಡಿದ್ರೆ ಐರಾವತ, ರಾಜಹಂಸ, ಪುಷ್ಪಕ ಬಸ್ಸುಗಳು ಸಾಲು ಸಾಲಾಗಿ ನಿಂತಿರ್ತವೆ. ಈ ಬಸ್, ಇಳಿಯೋ ಆಗಿಲ್ಲ. ಆ ಬಸ್, ಹತ್ತೋ ಹಾಗಿಲ್ಲ [೪].
ಇಂತಹ ನಗುವಿನ ಜೊತೆ ಎಲ್ಲರಲ್ಲೂ ಆಗುವ ಅನುಭವಗಳನ್ನು ಮೇಲುಕು ಹಾಕುವ ಹಾಗೆ ಇಂದು ಇಂತಹದೇ ಪರಿಸ್ಥಿತಿಯಲ್ಲಿ ಅಳುವ ಆಗಿಲ್ಲ. ನಗುವ ಆಗಿಲ್ಲ ಅನ್ನೋ ಪರಿಸ್ಥಿತಿಯಲ್ಲಿ, ಮನಸ್ಥಿತಿಯಲ್ಲಿ ನಮ್ಮ ಜನ ದಿನಕಳೆಯುತ್ತಿದ್ದಾರೆ.
ನಗುವಾಗ ಚಿಂತೆ ಇರೋಲ್ಲ ಚಿಂತಿಸುವಾಗ ನಗು ಬರೋ. ನಾವು ನಕ್ಕರೂ, ಅತ್ತರೂ ಸಮಯ ನಿಲ್ಲದು, ಹಾಗಾಗಿ ನಮ್ಮೆಲ್ಲರ ಬದುಕಿನಲ್ಲಿ ನಗುವಿಗೆ ಜಾಸ್ತಿ ಜಾಗವಿರಲಿ.

### ೩. ಹಾಸ್ಯ ಲೋಕದ ಪರಿಚಯ :

ಹಾಸ್ಯ ಎಂದರೆ ಅನುಭವಗಳ ನಗೆಯನ್ನು ಪ್ರಚೋದಿಸುವ ಮತ್ತು ವಿನೋದವನ್ನು ಒದಗಿಸುವ ಪ್ರವೃತ್ತಿ. ಪ್ರಾಚೀನ ಕಾಲದಿಂದಲೂ ಎಲ್ಲಾ ವಯಸ್ಸಿನ ಮತ್ತು ಸಂಸ್ಕೃತಿಗಳ ಜನರು ಹಾಸ್ಯಕ್ಕೆ ಪ್ರತಿಕ್ರಿಯಿಸುತ್ತಾರೆ. ಒಬ್ಬ ವ್ಯಕ್ತಿ ಎಷ್ಟರ ಮಟ್ಟಿಗೆ ಹಾಸ್ಯಸ್ಪದನಾಗಿರುತ್ತಾನೆ ಎಂಬುದು ಭೌಗೋಳಿಕ ಸ್ಥಳ, ಸಂಸ್ಕೃತಿ, ಪ್ರೌಢತೆ, ಶಿಕ್ಷಣದ ಮಟ್ಟ, ನಡೆದು ಬಂದ ಪರಿಸರ ಸ್ನೇಹ-ಸಹವಾಸ ಬುದ್ಧಿವಂತಿಕೆ & ಸಂದರ್ಭ ಸೇರಿದಂತೆ ಅನೇಕ ಚರಗಳ ಮೇಲೆ ಅವಲಂಬಿಸಿರುತ್ತದೆ. ನಗೆ ಮಾನವರು ಮತ್ತು ಪ್ರೈಮೇಟ್‌ನ ಕೆಲವು ಇತರ ಪ್ರಜಾತಿಗಳಲ್ಲಿ ಸಾಮಾನ್ಯವಾಗಿ ಎದೆಗೂಡಿನ ಪೊರೆ, ಉಸಿರಾಟದ ವ್ಯವಸ್ಥೆ ಲಯಬದ್ಧವಾದ ಶಾರೀರಿಕ ಪ್ರತಿಕ್ರಿಯೆ. ಅದು ಬಾಹ್ಯ ಮತ್ತು ಆಂತರಿಕ ಉದ್ದೀಪಕಗಳಿಗೆ ಒಂದು ಪ್ರತಿಕ್ರಿಯೆ ನಗುವಾಗಿದೆ. ಅದು ಮೊದಲು ನಗೆ ಕಚಗುಳಿ ಅಥವಾ ಹಾಸ್ಯಮಯ ಮಾತುಗಳಿಂದ, ಹಾಡುಗಳಿಂದ, ಮಾವ-ಸೊಸೆ, ಗಂಡ-ಹೆಂಡತಿಯರ ನಗೆ ಚಟಾಕಿಗಳ ಮೂಲಕ ಹಾಸ್ಯ ಪ್ರಸಂಗಗಳು ಹುಟ್ಟಿಕೊಂಡವು. ಅದಕ್ಕೆ ಉದಾಹರಣೆ ಬಬೆಯವರ ಸಾಹಿತ್ಯ. ತೆನಾಲಿ ರಾಮನ ಕತೆಗಳು ಹಾಸ್ಯ ಕಲಾವಿದರ ಹಾಸ್ಯಗಳು ನಗುವಿನಿಂದ ಹಾಸ್ಯ ಎಂಬ ಪದವನ್ನು ಹುಟ್ಟಿಹಾಕಿವೆ [೫].

### ೪. ಕನ್ನಡದಲ್ಲಿ ಹಾಸ್ಯ ಸಾಹಿತ್ಯ :

ಹಳಗನ್ನಡ ಸಾಹಿತ್ಯದಲ್ಲಿ ಹಾಸ್ಯವನ್ನೇ ಪ್ರಧಾನವಾಗಿ ವಸ್ತುವಾಗುಳ್ಳ ಕೃತಿ ರಚನೆಯ ಪ್ರಯತ್ನ ನಡೆದಿಲ್ಲವಾದರೂ ಹಾಸ್ಯದ ಸನ್ನಿವೇಶಗಳು ಕೃತಿಯ ಒಡಲಲ್ಲಿ ಬಂದಾಗ ಕವಿಗಳು ತಮ್ಮ ಹಾಸ್ಯ ಪ್ರೌಢಿಮೆಯನ್ನು ಮೆರೆದಿದ್ದಾರೆ. ಶೃಂಗಾರ ಸನ್ನಿವೇಶಗಳಲ್ಲಿ ರಾಜರ ಸುಖಸಂಕಥಾ ವಿನೋದಗಳಲ್ಲಿ ಸಾಮಯಿಕ ಚತುರೋಕ್ತಿಗಳಲ್ಲಿ, ಯುದ್ಧ ಪ್ರಸಂಗಗಳಲ್ಲಿ, ವೀರರ ಮೊದಲಕೆಯ ಮಾತುಗಳಲ್ಲಿ, ವಾಗ್ವಾದ ಸಂದರ್ಭಗಳಲ್ಲಿ ಇಂತ ಹತ್ತಾರು ಕಡೆ ಹಾಸ್ಯ ರಚನೆಗೆ ಅವರು ಅವಕಾಶ ಮಾಡಿಕೊಂಡಿದ್ದಾರೆ. ಕನ್ನಡದ ಅಸಂಖ್ಯಾದ ಶಾಸನಗಳಲ್ಲಿ ಹಾಸ್ಯ ಪ್ರಸಂಗಗಳು ಅಲ್ಲಲ್ಲಿ ಮಿಂಚುವುದನ್ನು ಕಾಣಬಹುದು. ಅಂಥ ಒಂದು ಶಾಸನದ ನಾಯಕ ವಿಕ್ರಮಸಾಂತ ರಣರಂಗದಲ್ಲಿ ಇವನ ಪ್ರತಾಪ ಅಷ್ಟಿಷ್ಟಲ್ಲ. ಈತ ಕೊಂದ ಶತ್ರುಗಳ ಹೆಣಗಳನ್ನುಂಡ ಮರಳುಗಳಿಗೆ ಹಬ್ಬ ಅಜೀರ್ಣ. ಅವು ವೈದ್ಯ ಮರುಳಿನ ಬಳಿಗೆ ಹೋದಾಗ ಆ ವೈದ್ಯ ಸೂಚಿಸಿದ ಔಷಧವಾದರೂ ಮರಳುಗಳಿಗೆ ಮಾತ್ರವೇ ಉಚಿತ, ಅಜೀರ್ಣವಾದಾಗ ಆನೆ ನೂಗುವುದೇ ಮದ್ದು ಮರಳುಗಳು ಹಾಗೆಯೇ ಮಾಡಿದವು. ರೋಗ ವಾಸಿಯಾಯ್ತು. ವಿಸಂಗತ ವಿಚಾರದಿಂದ ಮಿನುಗುವ ಹಾಸ್ಯಕ್ಕೆ ಇದೊಂದು ಉತ್ತಮ ದೃಷ್ಟಾಂತ.
ಕವಿರಾಜ ಮಾರ್ಗದಲ್ಲಿ ವ್ಯಾಕರಣ, ಛಂದಸ್ಸು, ಭಾಷೆ ಕುರಿತ ವಿವೇಚನೆಯ ನಡು-ನಡುವೆ ಉದಾಹರಣೆಗಾಗಿ ಕೊಟ್ಟಿರುವ ಪೂರ್ವಕವಿ ಕೃತಿ ಖಂಡಗಳಲ್ಲಿ ಅಲ್ಲಲ್ಲಿ ಬಗೆಬಗೆಯ ಹಾಸ್ಯ ಮಿನುಗುತ್ತವೆ. ಕವಿರಾಜ ಮಾರ್ಗಕಾರನಿಗೂ ಹಾಸ್ಯವನ್ನು ಗುರುತಿಸುವ ಶಕ್ತಿಯಿತ್ತು ಅಂಥ ಹಾಸ್ಯ ಪ್ರಸಂಗಗಳ ಮೇಲೆ ಆತ ಬೆರಳಚ್ಚು ತೋರಿಸಿದ್ದಾನೆ ಎನ್ನಬಹುದು.

ಕಾಮಿಡಿ ಎಂಬ ಪದವು ವ್ಯುತ್ಪತ್ತಿಯಿಂದ ಸಂಪರ್ಕಗೊಂಡಂತೆ ತೋರುತ್ತದೆ. ಗ್ರೀಕ್ ಕ್ರಿಯಾ ಪದದ ಅರ್ಥ. "ಮನೋಹರ" & ಹಾಸ್ಯವು ವಿನೋದದಿಂದ ಹುಟ್ಟಿಕೊಂಡಿತು. ವಿಧಿವಿಧಾನಗಳು ಡಿಯೋನೈಸಸ್, ದೇವರು ಸಸ್ಯವರ್ಗ, ಹಾಸ್ಯದ ಮೂಲವು ಸಸ್ಯವರ್ಗದ ಆಚರಣೆಯೊಂದಿಗೆ ಬಂಧಿಸಲ್ಪಟ್ಟಿದೆ. ಅರಿಸ್ಟಾಟಲ್ ಕಾವ್ಯ ಶಾಸ್ತ್ರದಲ್ಲಿ ಹಾಸ್ಯ ಹುಟ್ಟಿಕೊಂಡಿತು. ಕೀಳುಪ್ರಕಾರದ ಕವಿಗಳ ಅಜ್ಞಾನ ಕಾರ್ಯಗಳ ಇನ್ವೆಸ್ಟಿವ್‌ಗಳಲ್ಲಿ ಪ್ರಸ್ತಾಪಿಸಿ ಹಾಸ್ಯದ ಕಡೆಗೆ ತಿರುಗಿಕೊಂಡರು. ಹಾಸ್ಯವು ನಾಟಕದ ಉಪ ಪ್ರಕಾರಗಳಲ್ಲಿ ಒಂದಾಗಿದೆ [೬].

## ೫. ಉಪಸಂಹಾರ :

ನಗಿಸುವುದು ನಗುವ-ನಗಿಸುವ ಕಲೆ ಒಂದು ವರದಾನ, ಹಾಸ್ಯ ಎಂಬುದು ಕೇವಲ ಕೆಲವರಿಗೆ ಮಾತ್ರ ದೈವಾನುಗ್ರಹದಿಂದ ಲಭಿಸಿರುವ ವರ. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಹಾಸ್ಯ ಪ್ರಜ್ಞೆ ಇದ್ದೇ ಇರುತ್ತದೆ. ಅದು ಸುಪ್ತವಾಗಿರಬಹುದು. ನಿಷ್ಕ್ರೀಯವಾಗಿರಬಹುದು. ಹಾಸ್ಯ ಮಾಡುವುದು, ಸುಲಭಕಾರ್ಯವಲ್ಲ. ಆದರೆ ವ್ಯಾಪ್ತಿ ಮಹಾಸಾಗರದಂತೆ ಆಗಾಧ, ಅಸಂಖ್ಯ ಶ್ರೇಷ್ಠ ತತ್ವಜ್ಞಾನಿಗಳೂ, ವಿದ್ವನ್ಮಣಿಗಳೂ, ದಾರ್ಶನಿಕರೂ, ರಾಜಕೀಯ ಧುರೀಣರೂ ಸಮಾಜ ಸುಧಾರಕರೂ ಹಾಗೂ ವಾಣಿಜ್ಯೋದ್ಯಮಿಗಳೂ ಹಾಸ್ಯ ಪ್ರಜ್ಞೆಯ ಅನೇಕ ಮುಖಗಳನ್ನು ತಮ್ಮ ಅನುಭವದ ಉದಾಹರಣೆ ಮೂಲಕ ನಮಗೆ ಪರಿಚಯ ಮಾಡಿಕೊಟ್ಟಿದ್ದಾರೆ.
ಮಾರ್ಗದರ್ಶಕರ ಸಹಕಾರದಿಂದ, ಅನೇಕ ಕಥಾನಕಗಳನ್ನೂ ಉಲ್ಲೇಖವನ್ನು ಹಾಸ್ಯಕ್ತಿಗಳನ್ನು, ಅವಲೋಕನಗಳನ್ನೂ ವೃತ್ತಾಂಶಗಳನ್ನೂ ಈ ಬಗೆಯ ಸಾಮಗ್ರಿಗಳನ್ನೂ ಹಾಸ್ಯ ಪ್ರಜ್ಞೆಯ ಸಾಮರ್ಥ್ಯ ಹಾಗೂ ಬಹು ಬಗೆಯ ಉಪಯೋಗಗಳನ್ನು ಸಾಕ್ಷ್ಯಾಧಾರಗಳೊಡನೆ ವಾಚಕರ ಮುಂದೆ ಪ್ರಮಾಣಿಕರಿಸುವ ಪ್ರಯತ್ನ ಮಾಡಲಾಗಿದೆ.

ನಗುವು ಸಹಜದ ಧರ್ಮ;
ನಗಿಸುವುದು ಪರಧರ್ಮ।
ನಗುವ ಕೇಳುತ ನಗುವುದತಿಶಯದ ಧರ್ಮ॥
ನಗುವ ನಗಿಸುವ ನಗಿಸಿ ನಗುತ ಬಾಳುವ ವರವ।
ಮಿಗೆ ನೀನು ಬೇಡಿಕೊಳೊ-ಮಂಕುತಿಮ್ಮ

## ಆಕಾರ ಗ್ರಂಥ :

[೧] ಬೇಲೂರು ರಾಮಮೂರ್ತಿ (೨೦೧೧) ಸಮೃದ್ಧ ಹಾಸ್ಯ, ರವಿ ಗ್ರಾಫಿಕ್ಸ್, ಬೆಂಗಳೂರು (೧-೨೫೦.). https://doi.org/10.5281/zenodo.8169647

[೨] ಗೌರೀಸುತ (೨೦೧೮) ಹಾಸ್ಯೋಪನಿಷತ್ತು. ರಾಘವೇಂದ್ರ ಪ್ರಿಂಟರ್, ಮೈಸೂರು, (೧-೨೬೦.)

[೩] ಬಿ.ಆರ್. ಲಕ್ಷ್ಮಣ್‌ರಾವ್ (೨೦೧೭) ನಗೆ, ಬಗೆಬಗೆ ದಿವ್ಯ ಪ್ರಿಂಟ್ರಾನಿಕ್ಸ್ ಬೆಂಗಳೂರು. (೧-೮೬.). https://doi.org/10.5281/zenodo.8169606

[೪] ಎಂ.ಎಸ್. ನರಸಿಂಹ ಮೂರ್ತಿ (೨೦೦೬) ಬೆಸ್ಟ್ ಆಫ್ ನರಸಿಂಹಮೂರ್ತಿ ಆಯ್ದ ನಗೆ ಬರಹಗಳು, ಸ್ಕ್ಯಾನ್ ಪ್ರಿಂಟರ್ ಬೆಂಗಳೂರು-(೧-೨೦೭.). https://doi.org/10.5281/zenodo.8169623

[೫] ಸ್ಪೀನ್ಸ್ ಫೆಡರಿಕ್ ರುಡೋಲ್ಸ್ (೧೯೭೨) ಲಾಫಿಂಗ್ ಫಿಜಿಯೋಲಜಿ (೫೯-೬೫). https://doi.org/10.5281/zenodo.8169631

[೬] ಶಲ್ಟ್. ಓ.ಆರ್. ಹರಿಚೆ (೧೯೭೪) ಡೆವಲಪ್‌ಮೆಂಟ್ ಆಫ್ ಅಫ್ರಿಸೆಷನ್ ಆಫ್ ದರ್ಬಲ್ ಜೋಕ್ಸ್. (೧೦-೩೦). https://doi.org/10.5281/zenodo.8169560

[೭] ಎಂ.ಆರ್. ವಿಜಯಲಕ್ಷ್ಮೀ (೨೦೧೮) ಹಾಸ್ಯ ಸಂಪದ, ಪದ್ಮ ಶೇಖರ ಪ್ರಿಂಟರ್, ಮೈಸೂರು (೧-೯೨). https://doi.org/10.5281/zenodo.8169544

********